**ಓ.ಎಸ್.ನಂಃ 18/2021**

**ಡಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 02.04.2026 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ವಾದಿಯ ಮನೆಯ ಈಶಾನ್ಯ ಮೂಲೆಗೆ ನನ್ನ ಮನೆ ಇದೆ. ನಿಡಿ2 ರಲ್ಲಿ ಕಾಣುವ ಬೆಸ್ಮೆಂಟ್ ನನಗೆ ಸೇರಿದ್ದು. ನನ್ನ ಸ್ವತ್ತಿನ ಸಂಖ್ಯೆ ನನಗೆ ಗೊತ್ತಿಲ್ಲ. ವಾದಿಯ ಸ್ವತ್ತಿನ ವಿಸ್ತೀರ್ಣ 35x39 ಅಡಿ ಎಂದರೆ ಸರಿಯಲ್ಲ. ವಾದಿ ಹಾಜರುಪಡಿಸಿರುವ ದಾಖಲೆಯನ್ನು ನಾನು ವಕೀಲರ ಮೂಖಾಂತರ ನಾನು ತಿಳಿದುಕೊಂಡಿಲ್ಲ. ಸದರಿ ದಾಖಲೆಗಳ ಬಗ್ಗೆ ತಿಳಿದುಕೊಳ್ಳಲು ತೊಂದರೆ ಇಲ್ಲ. ಸಿದ್ದಮ್ಮ ನನ್ನ ತಾಯಿ. ನನ್ನ ತಾಯಿಯ ಹೆಸರಿಗೆ ಮೂರು ಅಂಕಣದ ಮನೆ ಇದೆ. ಮೊದಲು ಮೂರು ಅಂಕಣಕ್ಕೂ ಅಂಚಿನ ಮನೆ ಇತ್ತು ಈಗ ಅದನ್ನು ಕೆಡವಿ ಬೆಸ್ಮೆಂಟ್ ನಿರ್ಮಿಸಿದ್ದೇವೆ. 15 ವರ್ಷಗಳ ಹಿಂದೆ ನನ್ನ ತಾಯಿಯ ಹೆಸರಿನಲ್ಲಿ ಇದ್ದ ಮನೆಯನ್ನು ಕೆಡವಿದ್ದೇನೆ. ನನ್ನ ತಾಯಿ 25 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ಹೆಸರಿಗೆ ನನ್ನ ತಾಯಿಯ ಸ್ವತ್ತನ್ನು ಖಾತಾ ಮಾಡಿಸಿಕೊಂಡಿಲ್ಲ. ಬೆಸ್ಮೆಂಟ್ ನಿರ್ಮಿಸಲು ಪಂಚಾಯಿತಿಯಿಂದ ಲೈಸೆನ್ಸ್ ತಗೆದುಕೊಂಡಿಲ್ಲ. ಲೈಸೆನ್ಸ್ ಪಡೆಯಲು ಪ್ರಯತ್ನಿಸಿದ್ದೆ. ನನ್ನ ತಾಯಿ ಹೆಸರಿಗೆ ಇದ್ದ ವಿಸ್ತೀರ್ಣದ ಉದ್ದ ಮತ್ತು ಅಳತೆ ನನಗೆ ಗೊತ್ತಿಲ್ಲ. ನನ್ನ ಸ್ವತ್ತಿಗೆ ಕಂದಾಯ ಕಟ್ಟಿದ್ದೇನೆ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ